5 ನೇ ಆರೋಪಿ ಮೂಲ ಪ್ರಕರಣವಾದ SC 55/2016 ರಲ್ಲಿ ಸತತವಾಗಿ ಗೈರು ಹಾಜರಾದ ಕಾರಣ, ಮೂಲ ಪ್ರಕರಣವನ್ನು ವಿಂಗಡಿಸಿ 5 ನೇ ಆರೋಪಿಯ ವಿರುದ್ದ SC 188/2018 ರಲ್ಲಿ ಪ್ರತ್ಯೇಕ ಪ್ರಕರಣವನ್ನು ದಾಖಲಿಸಿದ್ದು, ನಂತರ 5 ನೇ ಆರೋಪಿತನನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಮೂಲ ಪ್ರಕರಣದಲ್ಲಿ ಸಾಕ್ಷ್ಯವನ್ನು ಮುಂದುವರಿಸಲು ತಿರ್ಮಾನಿಸಿ ನ್ಯಾಯಾಲಯವೂ ದಿನಾಂಕ 22.08.2024 ರಂದು ಆದೇಶಿಸಿದ್ದು, ಆ ಪ್ರಕಾರವಾಗಿ ಸಾಕ್ಷಿಯ ಮುಂದುವರಿದ ಮುಖ್ಯವಿಚಾರಣೆಯನ್ನು ಮತ್ತು ಮುಂದುವರೆದ ಪಾಟೀಸವಾಲನ್ನು ಪಡೆದುಕೊಳ್ಳಲಾಯಿತು.

**ಸಾಕ್ಷಿಯನ್ನು ದಿನಾಂಕ 24.10.2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯವಿಚಾರಣೆಃ **ಸರಕಾರಿ ಅಭಿಯೋಜಕರಿಂದ.**

46. 5 ನೇ ಆರೋಪಿ ಹಾಸಿಮ್ ಅಲಿಯಾಸ್ ಆಸೀಫ್ ನ ಪರಿಚಯ ಇರುತ್ತದೆ. ಆತ ಘಟನೆಯ ವೇಳೆಗೆ 5 ನೇ ಸೆಲ್ ನಲ್ಲಿ ಮಾಡೂರು ಯುಸೂಫ ಮತ್ತು ಮಹಮ್ಮದ್ ಇಕ್ಬಾಲ್ ನ ಜೊತೆ ಇರಿಸಲಾಗಿತ್ತು. 5 ನೇ ಆರೋಪಿ ರೀಪ್ ಹಿಡಿದುಕೊಂಡು 4 ನೇ ಸೆಲ್‌ನ ಬಳಿ ಸುತ್ತಾಡುತ್ತಿದ್ದ. 5 ನೇ ಆರೋಪಿ ಧರಿಸಿದ್ದ ಅಂಗಿ ಮತ್ತು ಆತ ಹಿಡಿದಿದ್ದ ರೀಪು ರಕ್ತಮಯವಾಗಿತ್ತು. ಸಾಕ್ಷಿ 5 ನೇ ಆರೋಪಿಯನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ.

ಮುಂದುವರೆದ ಪಾಟೀಸವಾಲುಃ **5** ನೇ ಆರೋಪಿತನ ಪರ ಶ್ರೀ ಐ.ಬಿ.**,** ವಕೀಲರಿಂದ**.**

47. 5 ನೇ ಸೆಲ್‌ನ ಒಳಗೆ ಮಾಡೂರು ಯುಸೂಫನ ಮೇಲೆ ಮಾರಣಾಂತಿಕ ಹಲ್ಲೆಯಾಗಿರುತ್ತದೆ ಎಂದರೆ ಸರಿ. ಮಾಡೂರು ಯುಸೂಫನ ಮೇಲೆ ಹಲ್ಲೆಯಾಗುವ ವೇಳೆಗೆ 5 ನೇ ಆರೋಪಿತನ ಮೇಲೆ ರಕ್ತ ಬರುವಂತಹ ಗಾಯಗಳು ಹಲ್ಲೆಯಿಂದ ಆಗಿದ್ದವು. 5 ನೇ ಆರೋಪಿ ಹಲ್ಲೆಯಿಂದಾಗಿ ಕುಸಿದು ಬಿದ್ದಿದ್ದ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಕುಸಿದು ಬಿದ್ದಿರಲಿಲ್ಲ ಆದರೆ ಹಲ್ಲೆಯಿಂದ ಗಾಬರಿಯಾಗಿ ಸುಸ್ತಾಗಿರಬಹುದು ಎಂದು ನುಡಿಯುತ್ತಾರೆ.

5 ನೇ ಆರೋಪಿತನನ್ನು ಕಾರಾಗೃಹದಿಂದ ನಾವು ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಿರುತ್ತೇವೆ. 5 ನೇ ಆರೋಪಿ ಕೈಯಲ್ಲಿ ಯಾವುದೇ ರೀಪು ಇಲ್ಲದಿದ್ದರೂ ತನಿಖಾಧಿಕಾರಿಗಳಿಗೆ ಸಹಾಯವಾಗುವಂತೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5 ನೇ ಆರೋಪಿತನ ಪರ ವಕೀಲರಾದ ಶ್ರೀ ಐ.ಬಿ ರವರು ಉಳಿದಂತೆ ಬೇರೆ ಆರೋಪಿಗಳ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.